# ರೀಲ್ಸ್‌ನಿಂದ ಪುಣ್ಯವತಿಗೆ ಜಿಗಿತ

**ಪ್ರಿಯಾಂಕ**
ಕಲರ್ಸ್ ಕನ್ನಡ
'ಪುಣ್ಯವತಿ'ಯ
ಪದ್ಮಿನಿ



◆ **ಪದ್ಮಿನಿ ಪಾತ್ರ ಹೇಗಿದೆ?**

ಇದೇ ನನ್ನ ಮೊದಲ ಧಾರಾವಾಹಿ. ಕಿರುತೆರೆಯ ಹೊಸ ಅನುಭವ. ನನ್ನ ವೈಯಕ್ತಿಕ ಜೀವನದ ಕಥೆಯೇ ಇಲ್ಲಿ ಅನಾವರಣ ಆಗುತ್ತಿದೆಯೇ ಎಂದು ಭಾಸವಾಗುತ್ತಿದೆ. ಚಿಕ್ಕವಯಸ್ಸಿನಿಂದಲೂ ಡಾನ್ಸ್ ಮಾಡಬೇಕು ಎಂಬ ಆಸೆಯನ್ನು ಇಟ್ಟುಕೊಂಡಿದ್ದವಳು ನಾನು. ಹಳ್ಳಿಯಲ್ಲಿ ಬೆಳೆದಿದ್ದರಿಂದ ಅದು ಸಾಧ್ಯ ಆಗಿರಲಿಲ್ಲ. ಬೆಂಗಳೂರಿಗೆ ಪಿಯುಸಿ ಓದಲು ಬಂದೆ. ಆಗ ಡಾನ್ಸ್ ಶಾಲೆಯನ್ನು ಹುಡುಕಿ ಕಲಿಯುವ ಪ್ರಯತ್ನ ಮಾಡಿದೆ. ಅಪ್ಪ 'ಬೇಡ. ಅದೆಲ್ಲ ನಮಗೆ ಅಲ್ಲ' ಎಂದು ಸುಮ್ಮನಾಗಿಸಿದರು.

ಇದೇ ರೀತಿ ಧಾರಾವಾಹಿಯಲ್ಲೂ ಆಗುತ್ತಿದೆ. ಸದ್ಯ ಕಥೆ ಕೂಡ ನನಗೆ ಹೋಲಿಕೆ ಆಗುತ್ತಿದೆ ಎಂದು ಅನಿಸುತ್ತಿದೆ. ಪದ್ಮಿನಿ ತನ್ನ ಅಪ್ಪನ ಮಾತನ್ನು ಮೀರುವುದಿಲ್ಲ. ತನ್ನ ತಂದೆಯ ಇಷ್ಟದಂತೆಯೇ ಇರಲು ಬಯಸುತ್ತಾಳೆ. ಅವರ ಬಗ್ಗೆ ಮನೆಯಲ್ಲಿ ಎಲ್ಲರಿಗೂ ಭಯ. ಅಪ್ಪನಿಗೆ ಪದ್ಮಿನಿ ಎಂದರೆ ತುಂಬ ಪ್ರೀತಿ. 'ಪುಣ್ಯವತಿ'ಯಲ್ಲಿನ ಪದ್ಮಿನಿಗೆ ತ್ರಿಕೋನ ಮುಖಗಳಿವೆ. ಅಪ್ಪನ ಮುದ್ದಿನ ಮಗಳು ಅಪ್ಪ ಬಯಸಿದಂತೆ ಇದ್ದಾಳೆ. ಅಪ್ಪನಿಗೆ ಗೊತ್ತಾಗದಂತೆ ಡಾನ್ಸ್ ಕಲಿಯುತ್ತಿದ್ದಾಳೆ. ಆಕೆಗೆ ಕುಣಿಯುವುದು ಎಂದರೆ ಹುಚ್ಚು, ನಂದನ್‌ನನ್ನು ಮೆಚ್ಚಿ ಪ್ರೀತಿ ತೋರಿಸುವುದು ಮತ್ತೊಂದು ಆಯಾಮ. ಒಟ್ಟಾರೆ ಮೂರು ಕೋನದಲ್ಲಿ ಈ ಪಾತ್ರ ಸಾಗುತ್ತಿದೆ.

◆ **ನಿಮ್ಮ ಪರಿಚಯವನ್ನು ಹೇಳಿ.**

ನಾನು ಹುಟ್ಟಿದ್ದು ಬೆಂಗಳೂರಿನಲ್ಲಿಯೇ. ಅಪ್ಪ ಶ್ರೀನಿವಾಸ್ ಅಡುಗೆ ಕೆಲಸ ಮಾಡುತ್ತಾರೆ. ಅಮ್ಮ ರಾಜಮ್ಮ, ರಿಯಲ್ ಎಸ್ಟೇಟ್ ಕಂಪನಿಯೊಂದರಲ್ಲಿ ಸಹಾಯಕಿ ಆಗಿದ್ದಾರೆ. ನನಗೆ ಒಬ್ಬ ತಮ್ಮ ಇದ್ದಾನೆ. ಅಪ್ಪ–ಅಮ್ಮ ಬೆಂಗಳೂರಿನಲ್ಲೇ ಇದ್ದರು. ನನ್ನನ್ನು ಮಾತ್ರ ಹುಲಿಯೂರುದುರ್ಗದ ಅಜ್ಜಿ ಮನೆಯಲ್ಲಿ ಬಿಟ್ಟಿದ್ದರು. 9 ತಿಂಗಳು ತುಂಬಿದ ಮಗು ಇದ್ದಾಗಿನಿಂದ ಅಲ್ಲೇ ಬೆಳೆದೆ. ನಾನು 10ನೇ ತರಗತಿಯ ತನಕ ಓದಿದೆ. ನಂತರ ಪಿಯು ಓದಲು ಬೆಂಗಳೂರಿಗೆ ಬಂದೆ. ಬಿ.ಎಸ್‌ಸಿ ಪದವಿಯನ್ನು ಪಡೆದಿದ್ದೇನೆ.

◆ **ನಟನೆಗೆ ಬಂದಿದ್ದು ಹೇಗೆ?**

ನಾನು ವಿಜಯ ನಗರ ಸರ್ಕಾರಿ ಡಿಗ್ರಿ ಕಾಲೇಜಿನಲ್ಲಿ ಓದುತ್ತಿದ್ದಾಗ ಥಿಯೆಟರ್ ಕ್ಲಬ್ ಸಂಪರ್ಕ ಬೆಳೆಯಿತು. ಅಧ್ಯಾಪಕ ರಘುನಂದನ್ ಪಾಠದ ಜೊತೆ ರಂಗ ಚಟುವಟಿಕೆ ಮಾಡಿಸುತ್ತಿದ್ದರು. ಕಾಲೇಜಿನ ಬಹುತೇಕ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೆ. ಥಿಯೆಟರ್ ಕ್ಲಬ್‌ನಲ್ಲಿ ಒಂದು ವರ್ಷ ಸಕ್ರಿಯಳಾಗಿ ಕೆಲಸ ಮಾಡಿದೆ. ನಂತರ ಓದಿನ ಕಾರಣಕ್ಕೆ ರಂಗ ಚಟುವಟಿಕೆ ಮುಂದುವರಿಸಲು ಸಾಧ್ಯ ಆಗಲಿಲ್ಲ. ಮಂಗಳಮುಖಿಯರ ವಿಷಯದ ಮೇಲೆ ಅವರು ನಾಟಕ ರೂಪಿಸಿದ್ದರು. ರಾಜ್ಯದಲ್ಲಿ ಆ ನಾಟಕ ಅನೇಕ ಕಡೆ ಪ್ರದರ್ಶನವಾಯಿತು. ರಿಯಾಲಿಟಿ ಶೋನಲ್ಲಿ ಆಡಿಷನ್ ಕೊಡಲು ಆಹ್ವಾನಿಸಿದರು. ಪರೀಕ್ಷೆ ಇತ್ತು. ಮನೆಯಲ್ಲಿ ಅದಕ್ಕೆ ಒಪ್ಪಿಗೆ ಕೂಡ ಸಿಗಲಿಲ್ಲ. ಪರೀಕ್ಷೆ ಮುಗಿದ ನಂತರ ಏನಾದರೂ ಮಾಡು ಎಂದು ಸಮಾಧಾನ ಮಾಡಿದರು. ಸಾಮಾಜಿಕ ಮಾಧ್ಯಮದಲ್ಲಿ ರೀಲ್ಸ್ ಮಾಡ್ತಿದ್ದೆ. ವೀಕ್ಷಕರಿಂದ ಒಳ್ಳೆಯ ಪ್ರೋತ್ಸಾಹ ಸಿಕ್ಕಿದೆ. ಕಲರ್ಸ್ ಕನ್ನಡದಿಂದ ಕಾಲ್ ಮಾಡಿ ಈ ಧಾರಾವಾಹಿಗೆ ಎಡಿಷನ್ ನೀಡಲು ಕರೆದರು. ಮೊದಲ ಆಡಿಷನ್‌ನಲ್ಲೇ ಅವಕಾಶ ಸಿಕ್ಕಿತು.

◆ **ರೀಲ್ಸ್ ಹೇಗೆ ಮಾಡ್ತಾ ಇದ್ರಿ?**

ಸಿನಿಮಾ ಗೀತೆಗಳನ್ನು ಆಯ್ಕೆ ಮಾಡಿಕೊಂಡು ಅದಕ್ಕೆ ಪೂರಕವಾಗಿ ನಟಿಸುತ್ತಿದ್ದೆ. ಅದಕ್ಕೆ ನಾನೇ ಎಡಿಟಿಂಗ್, ಕ್ಯಾಮೆರಾ ಕೆಲಸ ಮಾಡುತ್ತಿದ್ದೆ. ಇನ್‌ಸ್ಟಾಗ್ರಾಮ್‌ನಲ್ಲಿ ಸಾವಿರಾರು ಮಂದಿ ಫಾಲೋವರ್ಸ್ ಇದ್ದರು. ಇದು ಟಿಕ್‌ಟಾಕ್‌ನಿಂದ ಆರಂಭವಾಗಿತ್ತು. ಹಾಗಾಗಿ ಸಾಮಾಜಿಕ ಮಾಧ್ಯಮದಲ್ಲಿ ಸಣ್ಣದಾಗಿ ಪರಿಚಯವಾಗಿದ್ದೆ. ಮಾಡೆಲಿಂಗ್ ಶೂಟಿಂಗ್ ಮಾಡ್ತಾ ಇದ್ದೆ. ಇದುವರೆಗೂ ಸುಮಾರು 30 ಶೂಟಿಂಗ್ ಮಾಡಿಸಿದ್ದೇನೆ.

◆ **ನಾಳೆಗಳ ಬಗ್ಗೆ ಏನು ಯೋಚನೆ ಮಾಡಿದ್ದೀರಿ?**

ಮುಂದಿನ ಜೀವನವನ್ನು ಬಣ್ಣದ ಲೋಕದಲ್ಲಿಯೇ ತೆಗೆದುಕೊಂಡು ಹೋಗುತ್ತೇನೆ. ಸಿಕ್ಕಂತಹ ಅವಕಾಶವನ್ನು ಚೆನ್ನಾಗಿ ಬಳಸಿಕೊಂಡು. ಅಲ್ಲೇ ಕಲಿತು ಬೆಳೆಯಬೇಕು ಎನ್ನುವ ಆಸೆ ಇದೆ. ಸದ್ಯದ ಈ ಪ್ರಾಜೆಕ್ಟ್ ತುಂಬ ಖುಷಿ ಕೊಟ್ಟಿದೆ. ಇಷ್ಟು ಚೆನ್ನಾಗಿ ಇರುತ್ತದೆ ಎಂದುಕೊಂಡಿರಲಿಲ್ಲ. ಮನೆಯ ವಾತಾವರಣ ಸಿಕ್ಕಿದೆ. ನಿರ್ದೇಶಕರು, ಸಹನಟರು ತುಂಬ ಆತ್ಮೀಯವಾಗಿ ಇದ್ದಾರೆ. ಇದುವರೆಗೂ ನನ್ನ ಅಮ್ಮ ಚಿತ್ರೀಕರಣ ಸ್ಥಳಕ್ಕೆ ಬಂದಿಲ್ಲ. ಅವರು ಬಂದಿಲ್ಲ ಎಂದು ನನಗೆ ಯಾವತ್ತೂ ಅನ್ನಿಸಿಲ್ಲ. ಇದು ಮತ್ತೊಂದು ಮನೆಯಂತೆ ಅನ್ನಿಸಿದೆ.

■ **ರಾಘವೇಂದ್ರ ಕೆ.**